ಕರ್ನಾಟಕ ಸರ್ಕಾರ

ಸಂ: ಜಅಇ/ಮುಅಸಂ/ಖಘಒಕ/ಮಾರ್ಗಸೂಚಿ/2011-12

ಆಯುಕ್ತರ ಕಚೇರಿ,
ಜಲಾನಯನ ಅಭಿವೃದ್ಧಿ ಇಲಾಖೆ,
7ನೇ ಮಹಡಿ, ಕ.ಗೃ.ಮಂ.ಸಂಕೀರ್ಣ,
ಕಾವೇರಿ ಭವನ, ಕೆಂಪೇಗೌಡ ರಸ್ತೆ,
ಬೆಂಗಳೂರು, ದಿನಾಂಕ: 03.06.2011.
080-22100662

**ತಿದ್ದುಪಡಿ ಸುತ್ತೋಲೆ**

ವಿಷಯ: ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ (ಐಡಬ್ಲ್ಯುಎಂಪಿ) ಯೋಜನೆಯಡಿ ಗ್ರಾಮ ಪಂಚಾಯತಿಯ ಉಪ ಸಮಿತಿ ಮೂಲಕ ಅನುಷ್ಠಾನಗೊಳಿಸಲು ಮಾರ್ಗಸೂಚಿಗಳು (Operational Guidelines) ಕುರಿತು.

ಉಲ್ಲೇಖ: 1. ಸುತ್ತೋಲೆ ಸಂ: ಜಅಇ/ಜಕೃನಿ(ಐಜಿಎ)/ ಐಡಬ್ಲ್ಯುಎಂಪಿ/1/ 2010-11, ದಿನಾಂಕ: 19.11.2010.
2. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು-1 ರವರ ಪ್ರಸ್ತಾವನೆ.

ಉಲ್ಲೇಖ-1ರ ಸುತ್ತೋಲೆ ಮುಖಾಂತರ ಐಡಬ್ಲ್ಯುಎಂಪಿ ಯೋಜನೆಯ ಅನುಷ್ಠಾನದ ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಸದರಿ ಮಾರ್ಗಸೂಚಿಯಲ್ಲಿ ಅರಣ್ಯೀಕರಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹಾಲಿ ಚಾಲ್ತಿಯಲ್ಲಿರುವ ಪದ್ಧತಿ ಅನುಸರಿಸಿ ತಿದ್ದುಪಡಿ ಹೊರಡಿಸುವುದು ಸರಿ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ-1 ರವರು ಉಲ್ಲೇಖ-2 ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಅವರ ಶಿಫಾರಸ್ಸನ್ನು ಒಪ್ಪಿ ಸುತ್ತೋಲೆಯ ಕಂಡಿಕೆ ಸಂಖ್ಯೆ: 6(ii) ಮತ್ತು 10(iv) ರ ಕುರಿತು ಕೆಳಗಿನಂತೆ ತಿದ್ದುಪಡಿಗೆ ಆದೇಶಿಸಲಾಗಿದೆ.

| ಸುತ್ತೋಲೆಯ ಕಂಡಿಕೆ ಸಂಖ್ಯೆ | ತಿದ್ದುಪಡಿಯಿಂದ ಕೆಳಗಿನಂತೆ ಓದಿಕೊಳ್ಳುವುದು |
|---|---|
| 6(ii) | ಕಾಮಗಾರಿಗಳ ಅಳತೆ (ಮಾಪನ) ತೆಗೆದುಕೊಳ್ಳುವುದು ಮತ್ತು ಅಳತೆ ಪುಸ್ತಕವನ್ನು ಕ್ಷೇತ್ರಮಟ್ಟದಲ್ಲಿ ಕೆಲಸ ನಿರ್ವಹಿಸುವ ಫಾರೆಸ್ಟರ್ ಇವರು ಅಳತೆ ಪುಸ್ತಕದಲ್ಲಿ ದಾಖಲಿಸಿ ತಾಲ್ಲೂಕು ಜಲಾನಯನ ತಂಡದ ಅರಣ್ಯ ಘಟಕದ ಸದಸ್ಯರಾದ ವಲಯ ಅರಣ್ಯಾಧಿಕಾರಿಗಳ ದೃಢೀಕರಣದಿಂದ ಜಲಾನಯನ ಅಭಿವೃದ್ಧಿ ತಂಡದ ಅರಣ್ಯ ಘಟಕದ ಮುಖ್ಯಸ್ಥರಾದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪರಿಶೀಲಿಸಿ ಹಣ ಬಿಡುಗಡೆಗೆ ಶಿಫಾರಸ್ಸು ಮಾಡುವುದು. |
| 10(iv) | ಅರಣ್ಯೀಕರಣ ಕಾಮಗಾರಿಗಳ ಕುರಿತಾಗಿ ರೂ.1.00 ಲಕ್ಷವರೆಗಿನ ಅಂದಾಜು ವೆಚ್ಚದ ತಾಂತ್ರಿಕ ಮಂಜೂರಾತಿಯನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಕಚೇರಿಯಲ್ಲಿರುವ ಅರಣ್ಯ ಘಟಕದ ಮುಖ್ಯಸ್ಥರಾದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ನೀಡುವುದು. ರೂ.1.00 ಲಕ್ಷ ಮೀರಿದ ಅಂದಾಜು ಪತ್ರಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ನೀಡುವುದು. |

ಆಯುಕ್ತರು,
ಜಲಾನಯನ ಅಭಿವೃದ್ಧಿ ಇಲಾಖೆ.

ಸೂಕ್ತ ಕ್ರಮಕ್ಕಾಗಿ:
1. ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು.
2. ಕೇಂದ್ರ ಕಚೇರಿಯ ಎಲ್ಲಾ ಘಟಕ ಮುಖ್ಯಸ್ಥರಿಗೆ.
3. ಮುಖ್ಯ ಲೆಕ್ಕಾಧಿಕಾರಿಗಳು, ಕೇಂದ್ರ ಕಚೇರಿ.
4. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆಯ ಆಪ್ತ ಶಾಖೆಗೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆಗೆ.
6. ನಿರ್ದೇಶಕರ ಆಪ್ತ ಶಾಖೆಗೆ.
7. ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು.
8. ಆದೇಶದ ಕಡತಕ್ಕೆ.